
# ಆಚಾರ್ಯತ್ರಯರು

**ಕು**ಮಾರಿಲ ಭಟ್ಟರು ತ್ರಿವೇಣೀಸಂಗಮದ ದಡದಲ್ಲಿ ಇದ್ದರು. ಅವರು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ನಿಪುಣರು. ಅನೇಕ ಗ್ರಂಥಗಳನ್ನು ಕೂಡ ಬರೆದಿದ್ದಾರೆ. ಅವರು ಮಾರುವೇಷದಲ್ಲಿ ಬೌದ್ಧಸಂನ್ಯಾಸಿಯಾಗಿ, ಬೌದ್ಧಧರ್ಮದ ತತ್ತ್ವಗಳನ್ನು ಕಲಿತುಕೊಂಡರು. ಅಲ್ಲಿಂದ ಹೊರಬಂದು ಅವುಗಳನ್ನು ಖಂಡಿಸಿ ಪುಸ್ತಕಗಳನ್ನು ಬರೆದರು. ಶಂಕರರು ಅವರನ್ನು ಕಾಣುವ ಸಮಯದಲ್ಲಿ, ಅವರು ತಮ್ಮ ಶರೀರದ ಸುತ್ತಲೂ ಮರದ ಹೊಟ್ಟಿನ ಗುಡ್ಡವೊಂದನ್ನು ಮಾಡಿಕೊಂಡು, ಅದಕ್ಕೆ ಬೆಂಕಿಹಾಕಿಕೊಂಡಿದ್ದರು, ಆ ಮೂಲಕ ಶರೀರತ್ಯಾಗ ಮಾಡುವ ಸನ್ನಾಹದಲ್ಲಿದ್ದರು. ಆಗಲೇ ಅವರ ದೇಹದ ಕೆಳಭಾಗ ಸುಟ್ಟುಹೋಗಿತ್ತು. ಅವರ ಸುತ್ತಲೂ ಅವರ ಶಿಷ್ಯರು ದುಃಖಿಸುತ್ತಾ ನಿಂತಿದ್ದರು.

ಕುಮಾರಿಲ ಭಟ್ಟರು ಶ್ರೀಶಂಕರರ ಸಮಾಚಾರವನ್ನು ಮೊದಲೇ ಕೇಳಿದ್ದರು. ಈಗ ಈ ಬಾಲಯತಿಯನ್ನು ನೋಡಿ ಸುಪ್ರೀತರಾದರು. ಶಿಷ್ಯರಿಂದ ಅವರಿಗೆ ಸತ್ಕಾರ ಮಾಡಿಸಿದರು. ಅನಂತರ ಶಂಕರರು ತಮ್ಮ ಬ್ರಹ್ಮಸೂತ್ರ ಭಾಷ್ಯವನ್ನು ಕುಮಾರಿಲರಿಗೆ ತೋರಿಸಿದರು. ಅದರ ಮೊದಲ ಭಾಗವನ್ನು ಓದಿ, ಅವರು ಸಂತೋಷಪಟ್ಟರು. ಶಂಕರರು ಅವರನ್ನು ವಾಕ್ಯಾರ್ಥಕ್ಕೆ ಆಹ್ವಾನಿಸಿದರು. ಆದರೆ ಕುಮಾರಿಲರು, "ನನ್ನ ಶಿಷ್ಯನಾದ ಮಂಡನಮಿಶ್ರನನ್ನು ವಾದದಲ್ಲಿ ಗೆದ್ದರೆ ನಿಮ್ಮ ಸಿದ್ಧಾಂತಕ್ಕೆ ಎಲ್ಲೆಲ್ಲಿಯೂ ಜಯ ಸಿಕ್ಕುವುದು ಖಂಡಿತ" ಎಂದರು.



ಮಂಡನಮಿಶ್ರರು ಉದ್ದಾಮ ವಿದ್ವಾಂಸರಾಗಿದ್ದರು. ಅವರಿದ್ದದ್ದು ಮಾಹಿಷ್ಮತಿ ಎಂಬ ಊರಿನಲ್ಲಿ. ಅಲ್ಲಿಗೆ ಶಂಕರರು ಹೋದರು. ಮಂಡನಮಿಶ್ರರು ಶಂಕರರೊಂದಿಗೆ ವಾದ ಮಾಡಲು ಒಪ್ಪಿದರು. ವಾದಕ್ಕೆ ಪಣವಾಗಿ, 'ಸೋತವರು ಗೆದ್ದವರ ಶಿಷ್ಯರಾಗಬೇಕು' ಎಂದು ನಿರ್ಣಯವಾಯಿತು. ಇಂತಹ ಪ್ರಚಂಡ ವಿದ್ವಾಂಸರ ವಾದಕ್ಕೆ ತೀರ್ಪುಗಾರರನ್ನಾಗಿ ಮಂಡನ ಮಿಶ್ರರ ಪತ್ನಿಯಾದ ಉಭಯಭಾರತಿ ದೇವಿಯವರನ್ನು ಆರಿಸಿದರು. ಆಕೆ ಕೂಡ ಪಂಡಿತೆ; ಆಕೆಯನ್ನು ಜನರು ಸರಸ್ವತಿಯ ಅವತಾರ ಎನ್ನುತ್ತಿದ್ದರು. ಅನೇಕ ದಿನಗಳ ಕಾಲ ವಾದ-ವಿವಾದಗಳು ನಡೆದವು. ಕಡೆಗೆ ಮಂಡನಮಿಶ್ರರು ಸೋತರು. ಅವರು ಸನ್ಯಾಸಿಗಳಾಗಿ 'ಸುರೇಶ್ವರಾಚಾರ್ಯ' ಎಂಬ ಹೆಸರು ಪಡೆದು, ಶಂಕರರ ಶಿಷ್ಯರಾದರು. ಶಂಕರರಿಗೆ ದೊರೆತ ಈ ಜಯ ಬಹಳ ಮಹತ್ವದ್ದು. ಇದರಿಂದ ಅವರ ಬೋಧನೆಗೆ ತುಂಬ ಪ್ರಚಾರ ಸಿಕ್ಕಿತು. ಮಂಡನಮಿಶ್ರರಂಥ ಪ್ರತಿಭಾನ್ವಿತ ಶಿಷ್ಯರೂ ಸಿಕ್ಕಿದರು.

ಉಭಯಭಾರತಿಯು ಶಂಕರರನ್ನು, "ನಾನು ಮಿಶ್ರರ ಸಹಧರ್ಮಿಣಿ. ಅವರ ಸರ್ವಸ್ವದಲ್ಲೂ ಸಹಭಾಗಿನಿ. ತಾವು ಅವರನ್ನು ಜಯಿಸಿದ್ದರಿಂದ ಅರ್ಧ ಮಾತ್ರ ಜಯಿಸಿದಂತಾಯಿತು. ನನಗೂ ಕೆಲವು ಸಂದೇಹಗಳಿವೆ. ಅವುಗಳನ್ನು ನಿವಾರಿಸುವ ಕೃಪೆ ಮಾಡಬೇಕು" ಎಂದಳು. ಅದಕ್ಕೆ ಶಂಕರರು ಒಪ್ಪಿದರು. ಉಭಯಭಾರತಿಯ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದರು. ಮುಂದೆ ಆಕೆ ಕಾಮಶಾಸ್ತ್ರದ ಕೆಲವು ಪ್ರಶ್ನೆಗಳನ್ನು ಮುಂದೊಡ್ಡಿದಳು. ಸಂನ್ಯಾಸಿಗಳಾದ್ದರಿಂದ ಅದು ಶಂಕರರಿಗೆ ಪೂರಕವಾದ ಶಾಸ್ತ್ರವಾಗಿರಲಿಲ್ಲ. ಆದರೆ ಈಗ ಆ ಪ್ರಶ್ನೆಗಳಿಗೆ ಉತ್ತರಿಸಲೇಬೇಕಾಗಿದೆ. ಅವರು ಅದಕ್ಕಾಗಿ ಒಂದು ತಿಂಗಳು ಕಾಲಾವಧಿಯನ್ನು ಬೇಡಿದರು. ಒಂದು ಕಾಡಿನಲ್ಲಿ ಅಮರಕ ಎಂಬ ರಾಜ ಸತ್ತುಬಿದ್ದಿದ್ದ. ಈ ಸನ್ನಿವೇಶವನ್ನು ಉಪಯೋಗಿಸಿಕೊಂಡು ಶಂಕರರು 'ಪರಕಾಯಪ್ರವೇಶ' ವಿದ್ಯೆಯ ಮೂಲಕ ತಮ್ಮ ದೇಹವನ್ನು ತ್ಯಜಿಸಿದರು. ಯೋಗಶಕ್ತಿಯಿಂದ ಅಮರಕ ರಾಜನ ಶರೀರವನ್ನು ಪ್ರವೇಶಿಸಿದರು. ಒಂದು ತಿಂಗಳೊಳಗೆ ಕಾಮವಿದ್ಯೆಯನ್ನು ಅರಿತು ಪರಿಣತರಾದರು. ಅಷ್ಟರವರೆಗೂ ತಮ್ಮ ಶರೀರವನ್ನು ಸುರಕ್ಷಿತವಾಗಿ ಇಟ್ಟಿರಬೇಕೆಂದು ಶಿಷ್ಯರಾದ ಪದ್ಮಪಾದರಿಗೆ

ತಿಳಿಸಿದ್ದರು. ನಂತರ ಸ್ವಶರೀರಕ್ಕೆ ಹಿಂದಿರುಗಿದರು. ಮಾಹಿಷ್ಮತಿಗೆ ಬಂದರು. ಆದರೆ ಉಭಯಭಾರತಿಯು ವಾದದ ಅಗತ್ಯವಿಲ್ಲವೆಂದು ತಿಳಿಸಿ ಅವರ ಕ್ಷಮೆ ಕೋರಿದಳು.

ಅಲ್ಲಿಂದ ಶಂಕರರು ಶ್ರೀಶೈಲಕ್ಕೆ ಹೊರಟರು. ಅಲ್ಲಿ ಮಾಟ, ಮಂತ್ರಗಳೇ ಪ್ರಧಾನವಾಗಿರುವ ತಾಂತ್ರಿಕ ಆಚರಣೆ ಪ್ರಬಲವಾಗಿತ್ತು. ಆ ಮಾರ್ಗವನ್ನು ಅನುಸರಿಸುವವರನ್ನು ಕಾಪಾಲಿಕರು ಎನ್ನುತ್ತಾರೆ. ಒಂದು ದಿನ ಆಚಾರ್ಯರು ದೀರ್ಘಧ್ಯಾನದಲ್ಲಿ ನಿರತರಾಗಿದ್ದರು. ಅವರೊಬ್ಬರೇ ಇದ್ದರು. ಒಬ್ಬ ಕ್ರೂರ ಕಾಪಾಲಿಕ ಬಂದು, "ಸ್ವಾಮಿ, ತಾವು ಭಕ್ತರು ಕೇಳಿದುದನ್ನು ನೀಡುವುದರಲ್ಲಿ ಅಗ್ರಗಣ್ಯರೆಂದು ಕೇಳಿದ್ದೇನೆ. ನಾನು ಕಪಾಲಿಯ ಪರಮಭಕ್ತ. ಈ ಶರೀರದಿಂದಲೇ ಕಪಾಲಿಯ ಲೋಕವನ್ನು ಸೇರಿ, ಅಲ್ಲಿ ಸರ್ವಸುಖವನ್ನೂ ಅನುಭವಿಸಬೇಕೆಂದು ಆಶಿಸಿದ್ದೇನೆ. ಅದಕ್ಕಾಗಿ ತಮ್ಮಂತಹ ಮಹಾಮಹಿಮರ ತೊಂಬತ್ತೊಂಬತ್ತು ತಲೆಗಳನ್ನು ಕಪಾಲಿಗೆ ಸಮರ್ಪಿಸಿದ್ದೇನೆ. ಒಂದು ನೂರು ಪೂರ್ತಿ ಮಾಡಬೇಕು. ನನ್ನ ಈ ಇಚ್ಛೆಯನ್ನು ಪೂರ್ಣಗೊಳಿಸಲು ತಮ್ಮ ತಲೆಯನ್ನು ಬಯಸುತ್ತೇನೆ. ದಯವಿಟ್ಟು ನನ್ನ ಬೇಡಿಕೆಯನ್ನು ನಡೆಸಿಕೊಡಿ" ಎಂದನು. ಕೃಪಾಳುವಾದ ಶಂಕರರು ಅದಕ್ಕೆ ಒಪ್ಪಿದರು. ಅವನು ಪೂಜಾದಿಗಳನ್ನು ಕೈಗೊಂಡು ತ್ರಿಶೂಲಧಾರಿಯಾಗಿ, ಕೊರಳಿಗೆ ಮೂಳೆಗಳ ಮಾಲಿಕೆಯನ್ನು ಹಾಕಿಕೊಂಡನು; ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು, ಧ್ಯಾನಮಗ್ನರಾಗಿದ್ದ ಆಚಾರ್ಯರ ಸಮೀಪಕ್ಕೆ ಬಂದನು. ಶಂಕರರಿಗೆ ಅವನು ಬಂದದ್ದು ಗೊತ್ತಾಯಿತು. ಅವರು ಧ್ಯಾನದಲ್ಲಿ ಲೀನರಾದರು.

ಇನ್ನೇನು ಅವನು ಆಚಾರ್ಯರ ಶಿರಕ್ಕೆ ಕತ್ತಿ ಹಾಕಬೇಕು, ಅಷ್ಟರಲ್ಲಿ ಅವರ ಶಿಷ್ಯರಾದ ಸನಂದರಿಗೆ ಈ ವಿಚಾರ ತಿಳಿದುಹೋಯಿತು. ಅವರು ತಮ್ಮ ಇಷ್ಟದೈವವಾದ ನರಸಿಂಹನನ್ನು ಧ್ಯಾನಿಸಿದರು. ಆ ನರಸಿಂಹಸ್ವಾಮಿಯು ಸನಂದನ ಶರೀರವನ್ನು ಹೊಕ್ಕನು. ನರಸಿಂಹನ ಘರ್ಜನೆ ಕಾಡಿನಲ್ಲಿ ಮಾರ್ದನಿಸಿತು. ಒಂದೇ ಕ್ಷಣದಲ್ಲಿ ಕಾಪಾಲಿಕನ ಮೇಲೆ ಹಾರಿ ತನ್ನ ಉಗುರುಗಳಿಂದ ಅವನ ಉದರವನ್ನು ಬಗೆದು, ಕೆಳಗುರುಳಿಸಿದನು. ಹೀಗೆ ತನ್ನ ಗುರುವನ್ನು ಸನಂದನು ಕಾಪಾಡಿಕೊಂಡನು.

ಶ್ರೀಶೈಲದಿಂದ ಹೊರಟ ಶಂಕರರು ಗೋಕರ್ಣ ಕ್ಷೇತ್ರಕ್ಕೆ ಸಂದರ್ಶನವಿತ್ತರು. ಸಹ್ಯಾದ್ರಿ ಪರ್ವತಶ್ರೇಣಿಯ ತಪ್ಪಲಲ್ಲಿರುವ ಮೂಕಾಂಬಿಕಾ ಕ್ಷೇತ್ರಕ್ಕೆ ಬಂದರು. ಅಲ್ಲಿ ಪ್ರಭಾಕರನೆಂಬ ಒಬ್ಬ ಬ್ರಾಹ್ಮಣನ ಮಗನು ಮೂಗನಂತಿದ್ದನು; ಯಾರೊಂದಿಗೂ ಬೆರೆಯದೆ ಜಡನಾಗಿದ್ದನು. ಎಲ್ಲರೂ ಅವನನ್ನು ತಿರಸ್ಕಾರದಿಂದ ನೋಡುತ್ತಿದ್ದರು. ಆದರೆ ಅವನನ್ನು ನೋಡಿದ ತಕ್ಷಣವೇ ಶಂಕರರಿಗೆ ಅವನೊಬ್ಬ ಯೋಗಿ ಎಂಬುದು ತಿಳಿಯಿತು. ಆ ಬಾಲಕನಿಗೆ "ಯಾರು ನೀನು?" ಎಂದು ಕೇಳಿದರು. ಆ ಬಾಲಕನು, "ನಾನು ನಿತ್ಯಸ್ವರೂಪನಾದ ಆತ್ಮ" ಎಂದು ಹೇಳಿದನು. ಶಂಕರಾಚಾರ್ಯರು ಅವನಿಗೆ 'ಹಸ್ತಾಮಲಕ' ಎಂದು ಹೆಸರಿಟ್ಟು, ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು.

### ಶೃಂಗೇರಿಯ ಶಾರದಾಂಬೆಯ ಸ್ಥಾಪನೆ

ಶ್ರೀಶಂಕರರ ಜೀವನದ ಅತಿ ಮುಖ್ಯ ಘಟನೆಯೆಂದರೆ ಅವರು ತುಂಗಾನದಿಯ ದಡದಲ್ಲಿರುವ ಅತಿ ರಮಣೀಯ ಸ್ಥಳವಾದ ಶೃಂಗೇರಿಗೆ ಬಂದದ್ದು. ಅದು ಹಿಂದಿನ ಕಾಲದಲ್ಲಿ ವಿಭಾಂಡಕ, ಋಷ್ಯಶೃಂಗ ಎಂಬ ಇಬ್ಬರು ಮಹಾಋಷಿಗಳ ತಪೋಭೂಮಿಯಾಗಿದ್ದ ಪವಿತ್ರ ಸ್ಥಳ. ಒಂದು ಮಠವನ್ನು ಇಲ್ಲಿ ಸ್ಥಾಪಿಸಬೇಕೆಂಬ ಬಯಕೆ ಅವರಿಗೆ ಉಂಟಾಯಿತು. ಅದಕ್ಕೆ ಪ್ರಶಸ್ತವಾದ ಜಾಗವನ್ನು ಹುಡುಕುತ್ತಿರಲು, ನದಿಯ ದಂಡೆಯ ಮೇಲಿನ ಒಂದು ವಿಚಿತ್ರವಾದ ದೃಶ್ಯ ಅವರನ್ನು ಆಕರ್ಷಿಸಿತು. ಒಂದು ಕಪ್ಪೆ ತನ್ನ ಮರಿಗೆ ಜನ್ಮಕೊಡುವುದರಲ್ಲಿದೆ. ಅದು ಪ್ರಸವವೇದನೆಯಿಂದ ಯಾತನೆ ಪಡುತ್ತಿದೆ. ಅದಕ್ಕೆ ಒಂದು ಸರ್ಪ, ತನ್ನ ಹೆಡೆ ಎತ್ತಿ, ನೆರಳು ಕೊಟ್ಟು, ಕಾಪಾಡುತ್ತಿದೆ.

ಪರಸ್ಪರ ದ್ವೇಷಿಸುವ ಎರಡು ಪ್ರಾಣಿಗಳು ಹೀಗೆ ಒಂದಕ್ಕೊಂದು ಸೌಹಾರ್ದತೆಯಿಂದಿರುವ ಆ ಸ್ಥಳವನ್ನು ನೋಡಿ ಶಂಕರರಿಗೆ ಪರಮಾನಂದವಾಯಿತು. ಈ ಸ್ಥಳವೇ ತಾವು ಸ್ಥಾಪಿಸಲು ಇಚ್ಛಿಸಿರುವ ವೇದಾಂತಪೀಠಕ್ಕೆ ಯೋಗ್ಯವಾದುದು ಎಂದೆಣಿಸಿದರು. ಅಲ್ಲಿ ತಮ್ಮ ಮೊದಲ ಮಠವನ್ನು ಸ್ಥಾಪಿಸಲು ನಿರ್ಧರಿಸಿದರು. ಅಲ್ಲಿ ವಿದ್ಯಾಧಿದೇವತೆಯಾದ ಶ್ರೀಶಾರದೆಯನ್ನು ಪ್ರತಿಷ್ಠಾಪಿಸಿದರು. ಸುರೇಶ್ವರರನ್ನು ಆ ಪೀಠಕ್ಕೆ ಆಚಾರ್ಯರನ್ನಾಗಿ ನೇಮಿಸಿದರು. ಶಂಕರಾಚಾರ್ಯರು ವೇದಾಂತಪ್ರಚಾರಕ್ಕೆ, ಅನುಷ್ಠಾನಕ್ಕೆ ಮಾರ್ಗದರ್ಶನ ನೀಡಲು ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಕೇಂದ್ರಗಳನ್ನು ಸ್ಥಾಪಿಸಿದರು. ಅವುಗಳು ಯಾವುವೆಂದರೆ, ದಕ್ಷಿಣದ ಶೃಂಗೇರಿಯಲ್ಲಿ **ಶಾರದಾಪೀಠ**, ಪೂರ್ವದ ಪುರಿ ಕ್ಷೇತ್ರದಲ್ಲಿ **ಗೋವರ್ಧನ ಪೀಠ**, ಪಶ್ಚಿಮದ ದ್ವಾರಕೆಯಲ್ಲಿ **ಕಾಳಿಕಾ ಪೀಠ** ಮತ್ತು ಉತ್ತರದ ಬದರಿಕಾಶ್ರಮದಲ್ಲಿ **ಜ್ಯೋತಿರ್ಪೀಠ**. ಈ ಪೀಠಗಳಿಗೆ **ಆಮ್ನಾಯ ಪೀಠ** ಗಳೆಂದು ಹೆಸರು. (ಮುಂದುವರಿಯುವುದು)

# ನಾ ಕಂಡಂತೆ ಸ್ವಾಮೀಜಿ

**ಸ್ವಾಮಿ ವಿವೇಕಾನಂದರ ಬಗ್ಗೆ ಅನೇಕರು ತಮ್ಮ ನೆನಪುಗಳನ್ನು ಬರೆದಿದ್ದಾರೆ. ಅದರಲ್ಲೂ, ಅವರ ಸೋದರ ಸಂನ್ಯಾಸಿಗಳ ನೆನಪುಗಳು ಅತ್ಯಂತ ವಿಶಿಷ್ಟವಾದುವು. ಅವುಗಳಲ್ಲಿ ನಾವು ಸ್ವಾಮೀಜಿಯನ್ನು ಬಹಳ ಹತ್ತಿರದಿಂದ ಕಾಣುತ್ತೇವೆ. ಅವರ ಬಹುಮುಖಿ ವ್ಯಕ್ತಿತ್ವ, ಉದಾರವಾದ ಆಲೋಚನಾಲಹರಿ ಇಲ್ಲಿ ನಮಗೆ ಗೋಚರವಾಗುತ್ತದೆ. ಅಂಥ ಸೋದರ ಸಂನ್ಯಾಸಿಯೊಬ್ಬರ ಈ ಸ್ಮೃತಿಲೇಖನವನ್ನು ಸ್ವಾಮಿ ಪೂರ್ಣಾತ್ಮಾನಂದರು ಸಂಪಾದಿಸಿರುವ 'ಸ್ಮೃತಿರ್ ಆಲೋಯ್ ಸ್ವಾಮೀಜಿ' ಎಂಬ ಗ್ರಂಥದಿಂದ ಆಯ್ದು ಅನುವಾದಿಸಲಾಗಿದೆ. ಇದರ ಕೆಲಭಾಗ ಸ್ವಾಮಿ ಅನ್ನದಾನಂದರು ಬರೆದ 'ಸ್ವಾಮಿ ಅಖಂಡಾನಂದ' ಎಂಬ ಬಂಗಾಳಿ ಗ್ರಂಥದ ಇಂಗ್ಲಿಷ್ ಅನುವಾದದಲ್ಲಿಯೂ ಲಭ್ಯ. ಇದನ್ನು ಅನುವಾದ ಮಾಡಿ ಕೊಟ್ಟಿರುವ ಸ್ವಾಮಿ ಕರುಣಾಕರಾನಂದಜಿ ಅವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

**ಸ್ವಾ**ಮೀಜಿಯನ್ನು ಕುರಿತು ಏನನ್ನು ತಾನೆ ಹೇಳಲು ಸಾಧ್ಯ? ಅವರ ಮುಂದೆ ನಾವು ಎಷ್ಟೊಂದು ಸಣ್ಣವರು! ಅವರೊಡನೆ ಮಠದಲ್ಲಿ ಎಂತೆಂತಹ ದಿನಗಳು ಕಳೆದವು! ಚರ್ಚೆಗಳು ನಡೆಯುತ್ತ ನಡೆಯುತ್ತ ರಾತ್ರಿ ಎರಡು ಗಂಟೆಯಾಗಿ ಬಿಟ್ಟಿದೆ. ಸ್ವಾಮೀಜಿ ಇನ್ನು ಮಲಗಲು ತಮ್ಮ ಹಾಸಿಗೆಗೆ ಹೋಗದೆ ಕುರ್ಚಿಯಲ್ಲಿ ಕುಳಿತುಕೊಂಡೇ ಉಳಿದ ರಾತ್ರಿಯನ್ನು ಕಳೆದುಬಿಡುತ್ತಿದ್ದರು! ನಮ್ಮೆಲ್ಲರಿಗಿಂತ ಮುಂಚಿತವಾಗಿಯೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸುತ್ತಿದ್ದರು. ಅಂಗಿಯನ್ನು ಹಾಕಿಕೊಂಡು ಗಂಗೆಯ ದಡದಲ್ಲಿರುವ ಪೂರ್ವ ದಿಕ್ಕಿನ ವರಾಂಡದಲ್ಲಿ ತಿರುಗಾಡುತ್ತಿದ್ದರು. ನಾನು ಯಾವಾಗಲೂ ನಸುಕಿನಲ್ಲೇ ಏಳುವವನು, ಅತ್ಯಂತ ನಸುಕಿನಲ್ಲೆ ಎದ್ದು ನೋಡುತ್ತೇನೆ – ಅವರಾಗಲೇ ಅಡ್ಡಾಡುತ್ತಿದ್ದಾರೆ! ಸ್ವಾಮೀಜಿಯವರ ತಾಯಿಯ ಬಳಿಯಿಂದಲೂ ಕೇಳಿದ್ದೇನೆ, ಅವರು ಬಾಲ್ಯದಲ್ಲಿಯೂ ಹಾಗೂ ಯುವಕನಾಗಿದ್ದಾಗಲೂ (ಶ್ರೀರಾಮಕೃಷ್ಣರ ಬಳಿಗೆ ಬರುವುದಕ್ಕಿಂತಲೂ ಮೊದಲೇ) ಎಂದಿಗೂ ಹೊತ್ತಾದ ಮೇಲೆ ಮಲಗಿದ್ದೇ ಇಲ್ಲ, ನಸುಕಿನಲ್ಲೇ ಏಳುತ್ತಿದ್ದರು.

ಮಠದಲ್ಲಿರುವಾಗ ಸ್ವಾಮೀಜಿ ನಸುಕಿನಲ್ಲೇ ಎದ್ದು, ಮಂದಿರಕ್ಕೆ ಹೋಗಿ ಧ್ಯಾನ ಮಾಡುವ ನಿಯಮವನ್ನು ಇಟ್ಟುಕೊಂಡಿದ್ದರು. ಸ್ವಾಮಿ ತ್ರಿಗುಣಾತೀತಾನಂದರಿಗೆ ನಾಲ್ಕು ದಿನಗಳಿಂದ ಜ್ವರ. ಕೇವಲ ಸಬ್ಬಕ್ಕಿಯ ಗಂಜಿ ಕುಡಿದುಕೊಂಡಿದ್ದಾರೆ. ಸ್ವಾಮೀಜಿ ಧ್ಯಾನ ಮಾಡಲು ಮಂದಿರದೊಳಕ್ಕೆ ಹೋಗುವ ಮುನ್ನ ತ್ರಿಗುಣಾತೀತರನ್ನೂ ಕರೆದರು, "ಹೇ! ಬಾ. ನಿನಗೆ ಜ್ವರವಲ್ಲದೆ ಮತ್ತೇನು? ನಡೆ ಧ್ಯಾನ ಮಾಡಲು. ನೀವುಗಳು ಜ್ವರದ ಕಾರಣದಿಂದ ಧ್ಯಾನ ಮಾಡದೆ ಹೋದರೆ ಸಾಮಾನ್ಯ ಜನರು ನಿಮ್ಮನ್ನು ನೋಡಿ ಏನು ತಾನೇ ಕಲಿಯುತ್ತಾರೆ?" ಹೀಗೆ ಹೇಳುತ್ತ ಅವರನ್ನೂ ಮಂದಿರದೊಳಕ್ಕೆ ಧ್ಯಾನ ಮಾಡಲು ಕರೆದುಕೊಂಡು ಹೋದರು.

ಇನ್ನೊಂದು ದಿನ ಹೀಗಾಯಿತು. ಆಗಿನ್ನೂ ಮಠ ನೀಲಾಂಬರ ಮುಖರ್ಜಿಯ ತೋಟದಲ್ಲಿತ್ತು. ಒಂದು ದಿನ ರಾತ್ರಿ ಎರಡು ಗಂಟೆಯವರೆಗೂ ವೇದ–ವೇದಾಂತಗಳ ಚಿಂತನೆ ನಡೆಯಿತು. "ಪುನರ್ಜನ್ಮ ಇದೆಯೊ, ಇಲ್ಲವೊ, ಮಾನವನಿಗೆ ಪಶುಜನ್ಮ ಬಂದು ಅಧೋಗತಿ ಪ್ರಾಪ್ತವಾಗುತ್ತದೊ, ಇಲ್ಲವೊ" ಎಂಬುದೇ ಚರ್ಚೆಯ ವಿಷಯ. ಸ್ವಾಮೀಜಿ ತರ್ಕವನ್ನು ಆರಂಭಿಸಿ, ನಂತರ ತಟಸ್ಥರಾಗಿ ಸುಮ್ಮನೆ ನಗುತ್ತಿದ್ದರು. ಯಾರು ತಮ್ಮ ಪಕ್ಷವನ್ನು ಸಮರ್ಥಿಸಲು ಸರಿಯಾದ ತರ್ಕವನ್ನು ಮಾಡಲಾರದೆ ಸುಮ್ಮನಾಗುವರೊ, ಅವರಿಗೆ ಹೊಸ ಯುಕ್ತಿಯನ್ನು ಹೇಳಿಕೊಡುತ್ತ ವಾದಕ್ಕೆ ಜೀವ ತುಂಬುತ್ತಿದ್ದರು. ನಸುಕಿನ ಎರಡು ಗಂಟೆಯ ನಂತರ ಚಿಂತನೆಯನ್ನು ನಿಲ್ಲಿಸಲು ಹೇಳಿದರು. ನಂತರ ಎಲ್ಲರೂ ಮಲಗಲು ಹೋದರು. ನಾಲ್ಕು ಹೊಡೆಯಿತೊ, ಇಲ್ಲವೊ ಸ್ವಾಮೀಜಿ ನನ್ನನ್ನು ಎಬ್ಬಿಸಿಯೇ ಬಿಟ್ಟರು. ನೋಡುತ್ತೇನೆ, ಇಷ್ಟರಲ್ಲೇ ಸ್ವಾಮೀಜಿ ತಯಾರಾಗಿ ನಡೆದಾಡುತ್ತಿದ್ದಾರೆ. ತಮ್ಮಷ್ಟಕ್ಕೆ ತಾವೇ ಮೆಲ್ಲನೆ ಹಾಡಿಕೊಳ್ಳುತ್ತಿದ್ದಾರೆ. ನನಗೆ ಹೇಳಿದರು, "ಗಂಟೆ ಬಾರಿಸು, ಎಲ್ಲರೂ ಏಳಲಿ, ಅವರು ಮಲಗಿರುವುದನ್ನು ನನ್ನಿಂದ ನೋಡಲು ಸಾಧ್ಯವಿಲ್ಲ." ಹಾಗೂ ನಾನೊಂದು ಬಾರಿ ಅವರಿಗೆ ಹೇಳಿದೆ, "ಎರಡು ಗಂಟೆಗಷ್ಟೆ ಅವರೆಲ್ಲ ಮಲಗಲು ಹೋಗಿದ್ದಾರೆ. ಇನ್ನೂ ಸ್ವಲ್ಪ ಹೊತ್ತು ಮಲಗಿರಲಿ, ಬಿಡಿ." ಸ್ವಾಮೀಜಿ ಗಂಭೀರವಾಗಿ ನುಡಿದರು, "ಏನು, ಎರಡು ಗಂಟೆಗೆ ಮಲಗಿದ್ದಾರೆಂದು ಆರು ಗಂಟೆಗೆ ಏಳಬೇಕೇನು? ಕೊಡು ನನಗೆ, ನಾನೇ ಗಂಟೆ ಹೊಡೆಯುತ್ತೇನೆ. ನಾನಿರುವಾಗಲೇ ಹೀಗೆ! ಹೀಗೆ ಮಲಗಿಕೊಂಡಿರಲು ಮಠವಿದೆ ಎಂದುಕೊಂಡೆಯೋ, ಹೇಗೆ?" ನಾನು ಆಗ ಅತ್ಯಂತ ಜೋರಾಗಿ ಗಂಟೆ ಹೊಡೆಯಲು ಶುರು ಮಾಡಿದೆ. ಎಲ್ಲರೂ ದಡ ದಡನೆ ಎದ್ದು

ಜೋರಾಗಿ ಕೂಗಿಕೊಂಡರು, "ಏ ಯಾರದು? ಏ ಯಾರದು?" ನನ್ನನ್ನು ಅವರೆಲ್ಲ ಸೇರಿ ಹೊಡೆದೇ ಬಿಡುವರೊ ಎಂದುಕೊಂಡೆ. ಆದರೆ, ನನ್ನ ಹಿಂದೆ ಸ್ವಾಮೀಜಿ ನಿಂತುಕೊಂಡು ನಗುತ್ತಿರುವುದನ್ನು ಅವರೆಲ್ಲ ಕಂಡರು. ನಂತರ ಎಲ್ಲರೂ ಎದ್ದರು.

ಸ್ವಾಮೀಜಿ ಮಹಾಮೇಧಾವಿಗಳಾಗಿದ್ದರು. ಅವರಿಗೆ ಒಂದಿನಿತೂ ಕೋಪ ಬರುತ್ತಿರಲಿಲ್ಲ. ಅವರು **ಅಕ್ರೋಧ ಪರಮಾನಂದ**ರಾಗಿದ್ದರು. ನಾನೊಮ್ಮೆ ರಾಜಪುತಾನಕ್ಕೆ ಹೋಗಿದ್ದೆ. ಅಲ್ಲೊಬ್ಬ ಕ್ಷೌರಿಕ ನನಗೆ ಕ್ಷೌರ ಮಾಡುತ್ತಿರುವ ಸಮಯದಲ್ಲಿ ಹೇಳಿದ, "ಮಹಾರಾಜ್, ನಿಮ್ಮ ಸ್ವಾಮೀಜಿಯವರಿಗೆ ಇನ್ನೊಬ್ಬ ಸಾಟಿ ಇಲ್ಲ. ನಾವು ಮೂರ್ಖರು. ಅವರ ಪಾಂಡಿತ್ಯದ ಕುರಿತು ಏನು ಬಲ್ಲೆವು? ಅವರಂತೆ ಕೋಪವನ್ನು ನಿಗ್ರಹಿಸಿರುವ ವ್ಯಕ್ತಿಯನ್ನು ಮತ್ತೆಲ್ಲೂ ನೋಡಿಲ್ಲ. ಪಂಡಿತರು ಅವರನ್ನು ವಾದದಲ್ಲಿ ಸೋಲಿಸಲು ಬಂದಿದ್ದಾರೆ, ಅಪಮಾನ ಮಾಡುವಂತೆ ಮಾತನಾಡುತ್ತಿದ್ದಾರೆ. ಅದಕ್ಕವರು ನಸುನಗುತ್ತಲೇ ಉತ್ತರ ನೀಡುತ್ತಿದ್ದಾರೆ. ಕೊನೆಗೆ ಯಾರು ಅವರ ನಿಂದೆ ಮಾಡಲೆಂದೇ ಬಂದಿದ್ದರೊ, ಅವರೆಲ್ಲ ಸ್ವಾಮೀಜಿಯವರ ಗುಲಾಮರಾಗಿಬಿಟ್ಟರು!"

ಯಾವುದಾದರೂ ವಿಷಯದ ಬಗ್ಗೆ ಅವರ ಬಳಿ ಕೇಳಬೇಕಾದರೆ, ಅವರು ನಮಗಿಂತ ವಯಸ್ಸಿನಲ್ಲಿ ಸಣ್ಣವರು, ಅವರಿಂದ ಕಲಿಯಬೇಕಾದುದೇನಿದೆ ಎಂದು ನಮಗೆ ಅನ್ನಿಸುತ್ತಲೇ ಇರಲಿಲ್ಲ. ಅವರು ಎಂತಹ ಪಂಡಿತರು! ಆದರೂ, ಖೇತ್ರಿಯಲ್ಲಿ ನಾರಾಯಣದಾಸರ ಬಳಿ ಪಾಣಿನಿಯ ಅಷ್ಟಾಧ್ಯಾಯಿಯನ್ನು ಕಲಿಯಲು ಆರಂಭಿಸಿದರು. ಖೇತ್ರಿಯಲ್ಲಿ ಅವರಿಗಿಂತ ಹೆಚ್ಚು ಸಮ್ಮಾನಯೋಗ್ಯರು ಆಗ ಯಾರು ತಾನೇ ಇದ್ದರು? ರಾಜನ ಗುರುವಾಗಿ, ತಮ್ಮ ತ್ಯಾಗ-ತಪಸ್ಸಿನಿಂದ ಹಾಗೂ ಪಾಂಡಿತ್ಯದಿಂದ ಅವರು ಅಲ್ಲಿ ವಿಖ್ಯಾತರಾಗಿದ್ದರು. ಅವರು ನನಗೆ ಹೇಳಿದರು, "ನಾರಾಯಣದಾಸರ ಬಳಿಯಲ್ಲಿ ವಿದ್ಯಾರ್ಥಿಯಂತೆ ಅಧ್ಯಯನವನ್ನು ಆರಂಭಿಸಿದ್ದೇನೆ" ಎಂದು.

ಮನಸ್ಸು ಏಕಾಗ್ರಗೊಂಡರೆ ಬಾಹ್ಯ ಜಗತ್ತಿನ ಸಂಬಂಧ ಕಳಚಿ ಹೋಗುತ್ತದೆ. ಸ್ವಾಮೀಜಿಗೆ ಹೀಗೆಯೆ ಆಗುತ್ತಿತ್ತು. ರಾಜೇಂದ್ರ ಮಿತ್ರ ಬರೆದಿರುವ 'ಬೌದ್ಧಕಾಲದ ಇತಿಹಾಸ' ಎಂಬ ಗ್ರಂಥವನ್ನು ಓದುವಾಗ, ಸ್ವಲ್ಪ ಸಮಯದಲ್ಲಿಯೇ ಪುಸ್ತಕ ಅಲ್ಲಿಯೆ ಬಿದ್ದಿರುತ್ತಿತ್ತು. ಸ್ವಾಮೀಜಿಯ ಮನಸ್ಸು ಯಾವುದೊ ಒಂದು ಅಜ್ಞಾತ ರಾಜ್ಯಕ್ಕೆ ಹೋಗುತ್ತಿತ್ತು. ಅವರು ಹೇಳುತ್ತಿದ್ದರು, "ಕೋಣೆ, ಮನೆ, ಪುಸ್ತಕ, ಕುರ್ಚಿ, ಮೇಜು ಎಲ್ಲವೂ ಹಾರಿಹೋಗುತ್ತಿತ್ತು. ಅಲ್ಲಿ ಯಾವುದೂ ಇಲ್ಲ. ಒಂದು ಅನಂತರಾಜ್ಯದಲ್ಲಿ ನನ್ನ ಅಸ್ತಿತ್ವ ಕಳೆದುಹೋಗುತ್ತಿತ್ತು." ಶ್ರೀಶಂಕರಾಚಾರ್ಯ ಹಾಗೂ ಬುದ್ಧದೇವರಿಗೂ ಹಾಗೆಯೇ ಆಗುತ್ತಿತ್ತು.

ಸ್ವಾಮೀಜಿಯವರು ಅತ್ಯಂತ ಹೃದಯವಂತರಾಗಿದ್ದರು. ೧೮೯೮ರ ಒಂದು ಘಟನೆ. ಸ್ವಾಮೀಜಿಯವರೊಡನೆ ಡಾರ್ಜಿಲಿಂಗ್‌ನಲ್ಲಿದ್ದೇನೆ. ಬೆಳಿಗ್ಗೆ ನೋಡುತ್ತೇನೆ, ಅತ್ಯಂತ ಗಂಭೀರವದನರಾಗಿದ್ದಾರೆ. ಇಡೀ ದಿನ ಏನನ್ನೂ ತಿನ್ನಲಿಲ್ಲ, ಮೌನದಲ್ಲಿದ್ದಾರೆ. ವೈದ್ಯರು ಬಂದರು, ಆದರೆ ಅವರ ರೋಗವನ್ನು ಕಂಡುಹಿಡಿಯಲಾಗಲಿಲ್ಲ. ಒಂದು ದಿಂಬಿಗೆ ತಲೆಯನ್ನು ಒರಗಿಸಿಕೊಂಡು ಇಡೀ ದಿವಸ ಕುಳಿತುಕೊಂಡೇ ಇದ್ದರು. ನಂತರ ನನಗೆ ತಿಳಿದುಬಂತು. ಕೊಲ್ಕತಾದಲ್ಲಿ ಪ್ಲೇಗ್, ಮೂರನೆಯ ಒಂದು ಭಾಗ ಜನರು ನಗರ ಬಿಟ್ಟು ಹೊರಟು ಹೋಗುತ್ತಿದ್ದಾರೆ ಎಂಬ ಸುದ್ದಿಯನ್ನು ಕೇಳಿದಾಗಿನಿಂದ ಅವರಿಗೆ ಈ ಅವಸ್ಥೆ. ಆ ಸಮಯದಲ್ಲಿ ತಾವು ಎಲ್ಲವನ್ನೂ ಮಾರಿ ಸಂತ್ರಸ್ತರಿಗೆ ಸಹಾಯ ಮಾಡುವುದಾಗಿ ಘೋಷಿಸಿದರು. ನಾವೆಲ್ಲ ಎಷ್ಟಾದರೂ ಸನ್ಯಾಸಿಗಳು, ಮರದ ಬುಡದಲ್ಲೇ ವಾಸಿಸುವುದಾಗಿ ಹೇಳಿದರು. ಸ್ವಾಮೀಜಿಯವರ ಹೃದಯವೆಂಥದ್ದು! ಅದರ ನೂರರಲ್ಲಿ ಒಂದಂಶವೂ ನಮ್ಮಲ್ಲಿ ಇಲ್ಲ! ನಾವೆಲ್ಲ ಅವರ ಸಹೋದರ ಸಂನ್ಯಾಸಿಗಳು, ಇನ್ನು ಬೇರೆಯವರ ಬಗ್ಗೆ ಹೇಳುವುದೇನು? ದೇಶದ ದುಃಖ-ಕಷ್ಟಗಳ ಬಗ್ಗೆ ಮಾತನಾಡುತ್ತ ಸ್ವಾಮೀಜಿ ಹೇಗೆ ಭಾವಾವಿಷ್ಟರಾಗುತ್ತಿದ್ದರು! ನಾನು ಆಗ ಅವರನ್ನು ಪ್ರಶ್ನಿಸುತ್ತಿದ್ದೆ, "ಸೋದರ! ದೇಶ ಎಚ್ಚರಗೊಳ್ಳುತ್ತಿಲ್ಲವಲ್ಲ, ಏಕೆ?" ಅದಕ್ಕೆ ಉತ್ತರವಾಗಿ ಅವರು ಹೇಳುತ್ತಿದ್ದರು, "ಸೋದರ, ಇದೊಂದು ಪತನಗೊಂಡ ಜನಾಂಗ! ಇದರ ಲಕ್ಷಣವೇ ಹೀಗೆ." ಆಹಾ! ಸ್ವಾಮೀಜಿಯವರಿಗೆ ಯಾರು ತಾನೇ ಸಾಟಿ!

ಸ್ವಾಮೀಜಿ ಯಾವಾಗ ಒಂದು ಭಾವದ ಮೇಲೆ ಒತ್ತು ಕೊಡುತ್ತಿದ್ದರೊ, ಆಗ ನಮಗೆ ಅನ್ನಿಸುತ್ತಿತ್ತು, ಅದೊಂದೇ ಸತ್ಯ ಎಂದು. ಮಠದಲ್ಲಿ ಪ್ರಾಯಶಃ ಹೀಗೇ ಆಗುತ್ತಿತ್ತು. ಆದ್ದರಿಂದ, ಮಠಕ್ಕೆ ಹೊಸದಾಗಿ ಬಂದವರಿಗೆ, ಅವರ ಭಾವವನ್ನು ಹೀಗೆಯೇ ಎಂದು ಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲ. ಒಂದು ದಿನ ಸೇವಾಧರ್ಮದ ಕುರಿತಾಗಿ ಮಾತನಾಡುತ್ತ ಅವರು, ನಿಷ್ಕಾಮ ಕರ್ಮವೊಂದೇ ಮಾರ್ಗ, ಇನ್ನುಳಿದದ್ದೆಲ್ಲ ಮಿಥ್ಯೆ, ತಪ್ಪುಗಳು ಎಂದರು. ಶಾಸ್ತ್ರಾಧ್ಯಯನ ಅಥವಾ ಧ್ಯಾನ, ಜಪಗಳ ವಿಷಯ ಬಂದಾಗ ಅವರದು ಬೇರೆ ರೀತಿಯ ಧೋರಣೆಯೇ ಆಗಿರುತ್ತಿತ್ತು. ಆಗ ಅನ್ನಿಸುತ್ತಿತ್ತು, ಧ್ಯಾನಮಾರ್ಗವೇ ಶ್ರೇಷ್ಠ ಅಥವಾ ಜ್ಞಾನಮಾರ್ಗವೇ ಶ್ರೇಷ್ಠ, ಇನ್ನುಳಿದದ್ದೆಲ್ಲ ಕೆಲಸಕ್ಕೆ ಬಾರದ್ದು ಎಂದು! ಒಂದು ದಿನ ಸ್ವಾಮೀಜಿಯನ್ನು ನೋಡಿದಾಗ ಸ್ವಯಂ ಶಂಕರರೊ, ಬುದ್ಧನೊ ಎದುರಿಗೇ ಇದ್ದಂತೆ ಅನ್ನಿಸುತ್ತಿತ್ತು! ಮತ್ತೆ ಇನ್ನೊಮ್ಮೆ ಯಾವಾಗಲಾದರೂ